3) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರ, ವಾರ್ತಾ ಮತ್ತು ಪ್ರಸಾರ ಸಚಿವರು):- ಮಾನ್ಯ ಸಭಾಧ್ಯಕ್ಷರೇ, ದಿನಾಂಕ 7-8-96ರ ಲಿಖಿತ ಮೂಲಕ ಉತ್ತರಿಸುವ 23ನೇ ಪಟ್ಟಿಯಲ್ಲಿನ 55 ಪ್ರಶ್ನೆಗಳ ಪೈಕಿ 34 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ವಿಷಯ:- ಕೊಡಗು ಜಿಲ್ಲೆಯಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿನ ವೈದ್ಯರ ಹುದ್ದೆಗಳ ಭರ್ತಿ.

1299 (2249) **ಶ್ರೀ ಅಪ್ಪಚ್ಚು ರಂಜನ್ (ಸೋಮವಾರ ಪೇಟೆ):-** ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗು ಜಿಲ್ಲೆಯಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳೆಷ್ಟು?

ಆ) ಸದರಿ ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು? (ತಾಲ್ಲೂಕುವಾರು ವಿವರಗಳನ್ನು ಕೊಡುವುದು)

ಡಾ|| ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬಕಲ್ಯಾಣ ಸಚಿವರು):-

ಅ) ಕೊಡಗು ಜಿಲ್ಲೆಯಲ್ಲಿ 31 ವೈದ್ಯರ ಹುದ್ದೆಗಳು ಖಾಲಿ ಇರುತ್ತವೆ.

ಆ) ಲೋಕಸೇವಾ ಆಯೋಗದಿಂದ ಆಯ್ಕೆಯಾಗುವ ವೈದ್ಯರಿಂದ ಹಾಗೂ ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಕಾತಿ ಮಾಡಿ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. (ತಾಲ್ಲೂಕುವಾರು ಪಟ್ಟಿ ಲಗತ್ತಿಸಿದೆ). ಕೊಡಗು ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಲ್ಲಿ 31 ವೈದ್ಯರ ಹುದ್ದೆಗಳು ಖಾಲಿ ಇರುತ್ತವೆ.

ಮಡಿಕೇರಿ ತಾಲ್ಲೂಕು:

1)	ಜಿಲ್ಲಾ ಆಸ್ಪತ್ರೆ, ಮಡಿಕೇರಿ	-	5
2)	ಎಲ್.ಸಿ.ಡಿ.ಆರ್., ಮಡಿಕೇರಿ	-	4
3)	ಜಿಲ್ಲಾ ಪ್ರಯೋಗಶಾಲೆ, ಮಡಿಕೇರಿ	-	1
4)	ಪ್ರಾ. ಆ. ಕೇಂದ್ರ, ನಾಪೋಕ್ಲು	-	1

ಸೋಮವಾರಪೇಟೆ ತಾಲ್ಲೂಕು:

1)	ಸಾರ್ವಜನಿಕ ಆಸ್ಪತ್ರೆ, ಸೋಮವಾರಪೇಟೆ	-	2
2)	ಪ್ರಾ. ಆ. ಕೇಂದ್ರ, ಬಿಳಿಗೇರಿ	-	1 (ಹೊಸದಾಗಿ ಮಂಜೂರಾಗಿದೆ)

ವಿರಾಜಪೇಟೆ ತಾಲ್ಲೂಕು:

1)	ಸಾರ್ವಜನಿಕ ಆಸ್ಪತ್ರೆ, ವಿರಾಜಪೇಟೆ	-	6

2) ಪ್ರಾ. ಆ. ಕೇಂದ್ರ, ಕುಟ್ಟ - 2
3) ಪ್ರಾ. ಆ. ಕೇಂದ್ರ, ಉಡಿಕೇರಿ - 2
4) ಪ್ರಾ. ಆ. ಕೇಂದ್ರ, ವಾಲಿಬೆಟ್ಟ - 1
5) ಪ್ರಾ. ಆ. ಕೇಂದ್ರ, ಗೋಣಿಕೊಪ್ಪ - 2
6) ಪ್ರಾ. ಆ. ಕೇಂದ್ರ, ಮರೆನಾಡು - 1
7) ಪ್ರಾ. ಆ. ಕೇಂದ್ರ, ಸಿದ್ದಾಪುರ - 1
8) ಪ್ರಾ. ಆ. ಕೇಂದ್ರ, ಕಾಕೋಟು ಪರಂಬು - 1
9) ಪ್ರಾ. ಆ. ಕೇಂದ್ರ, ಚಂದನ್ ಕೋಟೆ - 1

ವಿಷಯ:- ಹಿರೇಕೆರೂರು ತಾಲ್ಲೂಕಿನಲ್ಲಿರುವ ಹಿರಿಯ ಪ್ರಾಥಮಿಕ ಶಾಲೆಗಳ ಹತ್ತಿರ ಕೈ ಪಂಪು ಕೊರೆಯಿಸುವುದು.

1301 (2197) **ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು):-** ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಿರೇಕೆರೂರು ತಾಲ್ಲೂಕಿನಲ್ಲಿ ಅನೇಕ ಗ್ರಾಮಗಳಲ್ಲಿ ಹಿರಿಯ ಪ್ರಾಥಮಿಕ ಶಾಲೆಗಳ ಹತ್ತಿರ ಕೊಳವೇ ಬಾವಿ ಕೊರೆಯಿಸಿ ಮಕ್ಕಳ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಒತ್ತಾಯಿಸಿದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಬಗ್ಗೆ ಸರ್ಕಾರ ಯಾವುದಾದರೂ ಯೋಜನೆ ಹಾಕಿಕೊಂಡು ಕೊನೇಪಕ್ಷ ತಾಲ್ಲೂಕಿಗೆ ವರ್ಷಕ್ಕೆ 7 - 8 ಶಾಲೆಗಳ ಹತ್ತಿರ ಬಾವಿ ಕೊರೆಯಿಸುವ ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ) ಬಂದಿದೆ.

ಆ) ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳಿಗೆ ಶೌಚಾಲಯ ಮತ್ತು ನೀರಿನ ಸೌಕರ್ಯ ಒದಗಿಸುವ ಕಾರ್ಯಕ್ರಮ ಈಗಾಗಲೇ ಹಮ್ಮಿಕೊಳ್ಳಲಾಗಿದೆ.

- 1995-96ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಗೆ ರೂ. 15.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿತ್ತು.
- ಈಗಾಗಲೇ ಹಿರೇಕೆರೂರು ತಾಲ್ಲೂಕಿನಲ್ಲಿರುವ ಒಟ್ಟು 101 ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 40 ಶಾಲೆಗಳಿಗೆ ಈ ಸೌಲಭ್ಯ ಕಲ್ಪಿಸಲಾಗಿದೆ.
- 1996-97ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಗೆ 2.50 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದೆ. ಅದರಲ್ಲಿ ಹಿರೇಕೆರೂರು ತಾಲ್ಲೂಕಿನ ಶಾಲೆಗಳಿಗೂ ಸಹ ನೀರು ಪೂರೈಕೆ ಮಾಡಲು ಕಾರ್ಯಕ್ರಮವಿದೆ. ಇದರಂತೆ ಹಂತ ಹಂತವಾಗಿ ಪ್ರತಿ ವರ್ಷ ಆಯವ್ಯಯ ಒದಗಿಸಿಕೊಂಡು ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳಿಗೆ ನೀರಿನ ಸೌಲಭ್ಯ ಒದಗಿಸಲಾಗುವುದು.